

## ಸದ್ದು ನಿಲ್ಲಿಸಿದ ಕೇಪಿನ ಡಬ್ಬಿ!

ಆ ದಿನಗಳೇ ಹಾಗೆ. ಸಣ್ಣದರಲ್ಲೇ ದೊಡ್ಡ ಖುಷಿ ಪಡುತ್ತಿದ್ದ ಕಾಲ. ಪ್ರತಿ ಹಬ್ಬದಲ್ಲಿಯೂ ಏನೋ ವಿಶೇಷತೆ. ಮಕ್ಕಳಿಗಂತೂ ಹಬ್ಬಗಳು ನಿಜವಾದ ಹಬ್ಬಗಳಾಗಿರುತ್ತಿದ್ದವು! ದೀಪಾವಳಿ, ತುಳಸಿ ಹಬ್ಬಗಳೆಂದರೆ ಮಕ್ಕಳಿಗೆ ಎಲ್ಲಿಲ್ಲದ ಖುಷಿ. ಕಾರಣ ಪಟಾಕಿ! ಅದರಲ್ಲೂ ಕೇಪಿನ ಡಬ್ಬಿ. ದೀಪಾವಳಿ ಮತ್ತು ತುಳಸಿ ಹಬ್ಬದ ಸಂದರ್ಭಗಳಲ್ಲಿ ಎಲ್ಲ ಮಕ್ಕಳ ಕೈಯಲ್ಲಿ ಪಿಸ್ತೂಲ್ ಇದ್ದೇ ಇರುತ್ತಿತ್ತು. ಕೇಪಿನ ಡಬ್ಬಿಯಲ್ಲಿ ಇರುವ ನೂರುಗಟ್ಟಲೆ ಕೇಪನ್ನು ಒಂದೊಂದಾಗಿ ಪಿಸ್ತೂಲ್ ಮೂಲಕ ಸ್ಫೋಟಿಸಿದಾಗ ಮಕ್ಕಳಿಗೆ ಆ ಸುಖದ ಗಮ್ಮತ್ತು ಸಿಗುತ್ತಿತ್ತು. ಇನ್ನು ಕೇಪಿನ ಸರ ಸ್ಫೋಟಿಸಲು ಇನ್ನೊಂದು ತೆರನಾದ ಹೆಚ್ಚು ಬೆಲೆಯ ಪಿಸ್ತೂಲ್. ಒಮ್ಮೆ ಕೇಪಿನ ಸರ ಸಿಕ್ಕಿಸಿ ಸ್ಫೋಟಿಸುವದೆಂದರೆ AK47 ನಿಂದ ಸ್ಫೋಟಿಸಿದಂತೆ ಅನುಭವ, ಆನಂದ.

ಕೇಪಿನ ಡಬ್ಬಿಯ ಬಗ್ಗೆ ಮಕ್ಕಳಿಗೆ ಹಿರಿಯರ ಸದಾ ಎಚ್ಚರಿಕೆ! 'ಹುಲ್ಲೊಣಿ ಬದಿಗೆ ಕೇಪುಡಿಬಡಿ' ಎಂಬುದು! ಆದರೂ ಅಂದು ಎಷ್ಟೋ ಹುಲ್ಲೊಣಿ ಕೇಪಿನ ಅಗ್ನಿಗೆ ಬಲಿಯಾದ ಉದಾಹರಣೆಗಳಿದ್ದವು! ಶಾಲೆಯಲ್ಲಿ ಕೇಪನ್ನು ಸ್ಫೋಟಿಸಿ ಪಟಾಕಿ ಹರೀಶ, ಪಟಾಕಿ ಸುರೇಶ ಎಂದು ಬಿರುದು ಪಡೆದು ಮಾಸ್ತರ ಹತ್ತಿರ ಹೊಡೆತ ತಿಂದದ್ದು ಸಾಮಾನ್ಯವಾಗಿರುತ್ತಿದ್ದವು! ಪಿಸ್ತೂಲ್, ಕೇಪಿನ ಡಬ್ಬಿ ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ದೊರೆಯುತ್ತಿದ್ದವು. ಇಂದಿನ ತಲೆಮಾರಿನ ಮಕ್ಕಳಿಗೆ ಕೇಪಿನ ಡಬ್ಬಿಯ ಅನುಭವವೂ ಇಲ್ಲ, ಅದರ ಮಜವೂ ಇಲ್ಲ!

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ




## ಶ್ವೇತ ಚೆಲುವೆ, ಏಳು ಸುತ್ತಿನ ಮಲ್ಲೆ

ಮಳೆಗಾಲ ಶುರುವಾಯಿತೆಂದರೆ ಶ್ವೇತ ಪುಷ್ಪ ಮಲ್ಲಿಗೆಯ ಕಂಪು ಬೆಂಗಳೂರಿನ ಪುಷ್ಪ ಮಾರುಕಟ್ಟೆಗಳನ್ನು ಆವರಿಸಿರುತ್ತದೆ. ಮನೆಯ ಹಿತ್ತಲಲ್ಲಿ ಗಿಡವಿದ್ದರೆ, ಅದರಲ್ಲಿ ಬಿಟ್ಟ ಒಂದು ಹೂವು ಮನೆಯ ಅಂಗಳದಲ್ಲೆಲ್ಲಾ ಪರಿಮಳ ಬೀರುತ್ತದೆ. ಶುಭ್ರವರ್ಣದ ಈ ಹೂವುಗಳನ್ನು ಕಂಡಾಗ ತೋಟದಲ್ಲಿ ನಕ್ಷತ್ರಗಳೇ ಚೆಲ್ಲಿರುವಂತೆ ಭಾಸವಾಗುತ್ತದೆ. ನಮ್ಮ ಮನೆಯ ಕೈತೋಟದಲ್ಲಿ ಒಂದು ಮಲ್ಲಿಗೆಯ ಗಿಡವಿದ್ದು ಅದರಲ್ಲಿ ಏಳು ಸುತ್ತಿನ ಮಲ್ಲಿಗೆ ಹೂವು ಬಿಟ್ಟಿದೆ. ಜೋಡಿಯಾಗಿ ದಿನಕ್ಕೆರಡರಂತೆ ಅರಳುತ್ತಿರುವ ಹೂವುಗಳು, ಎರಡು ವಾರದಲ್ಲಿ ಸುಮಾರು ಮೂವತ್ತು ಹೂವುಗಳಾಗಿವೆ. ಒಂದು ಹೂವಿನಲ್ಲಿ ನಾಲ್ಕು ಅಥವಾ ಅದಕ್ಕಿಂತಲೂ ಹೆಚ್ಚು ಸುತ್ತಿನ ದಳಗಳಿರುತ್ತವೆ. ಈ ಹೂವು ಅರಳುವುದನ್ನು ಗಮನಿಸುವುದೇ ಸೋಜಿಗ. ಅಂದಹಾಗೆ ಈ ಹೂವು ಒಂದೇ ದಿನದಲ್ಲಿ ಪೂರ್ತಿಯಾಗಿ ಅರಳದೆ, ಪದರ ಪದರವಾಗಿ ಅರಳುವ ಗುಣ ಹೊಂದಿದೆ. ಇದರ ಮಕರಂದವನ್ನು ಸವಿಯಲು ಬರುವ ಸಣ್ಣ ಕೀಟಗಳಿಗೆ, ಇರುವೆಗಳಿಗೆ ತೊಟ್ಟಿನಿಂದ ದಳಗಳನ್ನು ದಾಟಿ ಪುಷ್ಪ ಪಾತ್ರೆಯನ್ನು ತಲುಪುವುದರೊಳಗೆ ಏಳು ಸುತ್ತಿನ ಕೋಟೆಯನ್ನು ದಾಟಿ ಬಂದಂತಹ ಅನುಭವವಾಗಬಹುದೇನೋ.

–ಮೇಘನಾ ಉಪ್ಪೂರ, ಬೆಂಗಳೂರು

## 108 ಲಿಂಗಗಳ ಗಣಪ

ಬಳ್ಳಾರಿ ಜಿಲ್ಲೆಯ ಕುರುಗೋಡು ಪಟ್ಟಣವು ಐತಿಹಾಸಿಕ ಮಹತ್ವವುಳ್ಳದ್ದಾಗಿದೆ. ಕುರುಗೋಡು ಮಹಾಭಾರತ ಕಾಲದಲ್ಲಿ 'ಕುಂತಳ' ರಾಜ್ಯದ ರಾಜಧಾನಿಯಾಗಿತ್ತಂತೆ. ಪಟ್ಟಣದ ಮಧ್ಯಭಾಗದಲ್ಲಿರುವ ದೊಡ್ಡ ಬಸವೇಶ್ವರ ದೇವಾಲಯದಲ್ಲಿ 13 ಅಡಿ ಎತ್ತರವಿರುವ ಬೃಹತ್ ಗಾತ್ರದ ಬಸವೇಶ್ವರನ ವಿಗ್ರಹವು ದಕ್ಷಿಣ ಭಾರತದಲ್ಲೇ ದೊಡ್ಡದೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ದೇವಾಲಯದ ಪ್ರಾಂಗಣದ ಉತ್ತರ ಭಾಗದಲ್ಲಿ ಶಿವಲಿಂಗಾಕಾರದ ದೊಡ್ಡ ಬಂಡೆಯ ಮೇಲ್ಭಾಗದಲ್ಲಿ ಗಣೇಶನ ಮೂರ್ತಿಯಿದೆ. ಗಣೇಶ ವಿಗ್ರಹದ ಮುಂಭಾಗದಲ್ಲಿ ಕೆತ್ತಲಾಗಿರುವ 108 ಶಿವಲಿಂಗಗಳು ಹಂಪಿಯ ತುಂಗಭದ್ರಾ ನದಿಯ ದಡದಲ್ಲಿ ಸಹಸ್ರ ಲಿಂಗಗಳ ಸಮೂಹವನ್ನು ಹೋಲುತ್ತವೆ. ದೇವಾಲಯಕ್ಕೆ ಬರುವ ಭಕ್ತರು 108 ಲಿಂಗಗಳ ಸಮೂಹ ಹಾಗೂ ಗಣಪತಿಗೂ ಪೂಜೆ ಸಲ್ಲಿಸಿ ಕೃತಾರ್ಥರಾಗುತ್ತಾರೆ. ಹೀಗೆ 108 ಲಿಂಗಗಳು ಹಾಗೂ ಗಣೇಶ ಒಂದೇ ಕಡೆಯಿರುವುದು ಅಪರೂಪವೆಂದು ಹೇಳಬಹುದು.

–ಜಿ. ನಾಗೇಂದ್ರ, ಕಾವೂರು, ಸಂಡೂರು

